ಶ್ರೀ ಜಿ.ಸಿ. ಮಾಧುಸ್ವಾಮಿ : ಯಾವಾಗ ತೆಗೆದುಕೊಳ್ಳುತ್ತೀರಿ ಎಂಬುದನ್ನು ತಾವು ದಯವಿಟ್ಟು ಹೇಳಬೇಕು.

ಅಧ್ಯಕ್ಷರು : ಯಾವಾಗ ಅವಕಾಶ ಮಾಡಿಕೊಡಬೇಕು ಎಂಬುದು ನನ್ನ ವಿವೇಚನೆಗೆ ಬಿಟ್ಟಿದ್ದು.

ಶ್ರೀ ಪಿ.ಸಿ. ಮಾಧುಸ್ವಾಮಿ : ಯಾವಾಗ ಕಾಲಾವಕಾಶ ಮಾಡಿಕೊಡುತ್ತೀರಿ ಎಂಬ ಬಗ್ಗೆ ಹೇಳಬೇಕು.

ಅಧ್ಯಕ್ಷರು : ದಯಮಾಡಿ ತಾವು ಕುಳಿತುಕೊಳ್ಳಬೇಕು. ಈಗ ಗಮನ ಸೆಳೆಯುವ ಸೂಚನೆ ಬಗ್ಗೆ ಬಹಳ ಸದಸ್ಯರು ಬಹು ಹೊತ್ತಿನಿಂದ ಕಾದಿದ್ದಾರೆ, ಅವುಗಳು ಬಹಳ ಪ್ರಮುಖವಾದಂಥವುಗಳಾಗಿವೆ. ಆದುದರಿಂದ ದಯಮಾಡಿ ಸಹಕರಿಸಬೇಕು. ಈಗ ಮಾನ್ಯ ಎ.ಟಿ. ರಾಮಸ್ವಾಮಿಯವರು ಗಮನ ಸೆಳೆಯಬೇಕು.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಬಹಳ ಮಹತ್ವವಾದ ವಿಚಾರವನ್ನು ಸದನದಲ್ಲಿ ಹೇಳಲು ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು : ತಾವು ಈಗ ದಯಮಾಡಿ ಕುಳಿತುಕೊಳ್ಳಬೇಕು.

4. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ : ಆಲಮಟ್ಟಿ ಅಣೆಕಟ್ಟಿನಿಂದ ಆಂಧ್ರಕ್ಕೆ ನೀರು ಬಿಡುವ ಬಗ್ಗೆ

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಆಲಮಟ್ಟಿ ಅಣೆಕಟ್ಟಿನಿಂದ 50 ಟಿ.ಎಂ.ಸಿ. ನೀರನ್ನು ಆಂಧ್ರಕ್ಕೆ ಬಿಡಬೇಕೆಂದು ಹೇಳಿ ಆಂಧ್ರದ ನಿಯೋಗ ಪ್ರಧಾನ ಮಂತ್ರಿಯನ್ನು ಭೇಟಿ ಮಾಡಿದೆ.

ಅಧ್ಯಕ್ಷರು : ಅದನ್ನು ಚರ್ಚೆಗೆ ತೆಗೆದುಕೊಳ್ಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಆಂಧ್ರದಲ್ಲಿರುವ ವಿರೋಧ ಪಕ್ಷದವರೂ ಸೇರಿದಂತೆ ಎಲ್ಲರೂ ಕೂಡಿಕೊಂಡು ಡೆಲಿಗೇಷನ್ ಹೋಗಿದ್ದಾರೆ. ಆಲಮಟ್ಟಿ ಅಣೆಕಟ್ಟಿನಿಂದ ನೀರು ಬಿಡಬೇಕೆಂದು ಇವೊತ್ತು ರಾಜಕೀಯ ಒತ್ತಡವನ್ನು ತಂದು ಅವರುಗಳು ಒತ್ತಾಯ ಮಾಡುತ್ತಿದ್ದಾರೆ. ಆದಕಾರಣ ಈ ವಿಚಾರ ರಾಜ್ಯದ ಹಿತಾಸಕ್ತಿಗೆ ಧಕ್ಕೆಯಾಗುವಂಥದ್ದಾಗಿದೆ. ಇದೀಗ ಆಲಮಟ್ಟಿ ಅಣೆಕಟ್ಟೆಯಲ್ಲಿ ನೀರಿನ ಸಂಗ್ರಹಣೆ ಏನಾಗಿದೆ ಅದು ನಮ್ಮ ಕರ್ನಾಟಕ ರಾಜ್ಯದ ಆ ಭಾಗದ ರೈತರ ಜಮೀನುಗಳಿಗೆ ಉಪಯೋಗ ಮಾಡಬೇಕಾದ ಅವಶ್ಯಕತೆ ಇದೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಆಂಧ್ರದ ಸರ್ವಪಕ್ಷಗಳ ನಿಯೋಗ ಪ್ರಧಾನ ಮಂತ್ರಿಯವರನ್ನು ಭೇಟಿ ಮಾಡಿ 50 ಟಿ.ಎಂ.ಸಿ. ನೀರನ್ನು ಆಂಧ್ರಕ್ಕೆ ಬಿಡಬೇಕೆಂದು ಕೇಳಿದ್ದಾರೆ. ಆದ್ದರಿಂದ ನಮ್ಮ ಕರ್ನಾಟಕ ಸರ್ಕಾರ ಕೂಡ ಸರ್ವಪಕ್ಷಗಳ ನಿಯೋಗವನ್ನು ಕರೆದುಕೊಂಡು ಹೋಗುತ್ತಾರೆಯೇ ? ಸರ್ಕಾರದ ನೀತಿಯೇನು ಎಂಬ ಬಗ್ಗೆ ಸದನದಲ್ಲಿ ಸ್ಪಷ್ಟಪಡಿಸಬೇಕು.

ಅಧ್ಯಕ್ಷರು : ಈ ವಿಷಯ ಬಹಳ ಗಂಭೀರವಾದ ಹಾಗೂ ಪ್ರಮುಖವಾದ ವಿಷಯವಾಗಿದೆ. ಅದಕ್ಕೆ ನಾನು ಅವಕಾಶವನ್ನು ಕೊಟ್ಟಿದ್ದೇನೆ. ಆದುದರಿಂದ ಮಾನ್ಯ ಜಗದೀಶ್ ಶೆಟ್ಟರ್‌ರವರೇ ತಾವು ದಯಮಾಡಿ ಹತ್ತು ನಿಮಿಷದಲ್ಲಿ ವಿಷಯವನ್ನು ಸಭೆಗೆ ತಿಳಿಸಿ. ಮಂತ್ರಿಗಳು ಅದಕ್ಕೆ ಉತ್ತರ

ಕೊಡುತ್ತಾರೋ ಏನೋ ನೋಡೋಣ. ಆದರೆ ತಾವು ದಯಮಾಡಿ ಹತ್ತು ನಿಮಿಷದಲ್ಲಿ ಹೇಳಬೇಕಾಗಿರುವುದನ್ನು ಹೇಳಿ ಮುಗಿಸಿ.

† **ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮಾಂತರ)** : ಮಾನ್ಯ ಅಧ್ಯಕ್ಷರೆ, ಈ ವಿಷಯ ಪ್ರಸ್ತಾಪ ಮಾಡಲು ನನಗೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಮೊದಲನೆಯದಾಗಿ ತಮಗೆ ವಂದನೆಯನ್ನು ಸಲ್ಲಿಸುತ್ತಿದ್ದೇನೆ. ನಿನ್ನೆಯ ದಿನ ಆಂಧ್ರ ಪ್ರದೇಶದ ಮುಖ್ಯಮಂತ್ರಿಗಳು, ವಿರೋಧ ಪಕ್ಷದ ನಾಯಕರು ಮತ್ತು ಸರ್ವ ಪಕ್ಷಗಳ ಮುಖಂಡರುಗಳನ್ನೊಳಗೊಂಡ ನಿಯೋಗವು ಪ್ರಧಾನ ಮಂತ್ರಿಗಳಾದ ಮಾನ್ಯ ಶ್ರೀ ಮನಮೋಹನ್‌ಸಿಂಗ್‌ರವರನ್ನು ಭೇಟಿ ಮಾಡಿ ಆಲಮಟ್ಟಿ ಅಣೆಕಟ್ಟಿನಿಂದ ಆಂಧ್ರಕ್ಕೆ 50 ಟಿ.ಎಂ.ಸಿ. ನೀರನ್ನು ಬಿಡುವಂತೆ ಸೂಚನೆ ಕೊಡಬೇಕೆಂದು ಮನವಿ ಮಾಡಿಕೊಂಡಿದ್ದಾರೆ: ಬಹಳ ವರ್ಷಗಳ ಕಾನೂನಿನ ಹೋರಾಟ ಮತ್ತು ಎಲ್ಲಾ ರೀತಿಯ ಹೋರಾಟಗಳ ನಂತರ ಆಲಮಟ್ಟಿ ಅಣೆಕಟ್ಟೆಯ ಎತ್ತರವನ್ನು ಎತ್ತರಿಸಲಾಗಿದೆ. ಈಗ ಅಣೆಕಟ್ಟಿನಿಂದ ಏನು ನೀರು ಸಂಗ್ರಹವಾಗಿದೆ ಆ ಬಗ್ಗೆ ರಾಜ್ಯದ ಜನತೆಯ ಗಮನಕ್ಕೆ ತರಬೇಕಾಗುತ್ತದೆ. ಈಗೇನು ಅಣೆಕಟ್ಟಿನಿಂದ ನೀರು ಸಂಗ್ರಹಣೆ ಆಗಿದೆ ಇದು ಕರ್ನಾಟಕ ರಾಜ್ಯದ ಆ ಭಾಗದ ರೈತರ ಹೊಲಗಳಿಗೆ ಅತ್ಯವಶ್ಯಕವಾಗಿ ಬೇಕಾಗಿರುವಂಥದ್ದಾಗಿದೆ. ಆಲಮಟ್ಟಿ ಅಣೆಕಟ್ಟೆಯಲ್ಲಿ ನಾವು ಕಾನೂನುಬದ್ಧವಾಗಿಯೇ ನೀರನ್ನು ಸಂಗ್ರಹ ಮಾಡಿದ್ದೇವೆ, ಈ ರೀತಿಯಲ್ಲಿ ಸಂಗ್ರಹ ಮಾಡಿರುವ ನೀರಿನ ಮೇಲೆ ಕಾನೂನುಬದ್ಧವಾಗಿ ನೀರನ್ನು ಆಂಧ್ರ ಪ್ರದೇಶದವರಿಗೆ ಬಚಾವತ್ ಆವಾರ್ಡ್ ಪ್ರಕಾರ ಆ ನೀರನ್ನು ಕೊಡಿ ಎಂದು ಕೇಳುವುದಕ್ಕೆ ಯಾವುದೇ ರೀತಿಯಲ್ಲೂ ಕಾನೂನುಬದ್ಧವಾಗಿ ಹಕ್ಕು ಇರುವುದಿಲ್ಲ. ಆದರೂ ಕೂಡ ಈ ನೀರನ್ನು ಬಿಡುವಂತೆ ರಾಜಕೀಯ ಒತ್ತಡ ತರುವಂಥ ಪ್ರಯತ್ನವನ್ನು, ಹುನ್ನಾರವನ್ನು ಆಂಧ್ರ ಪ್ರದೇಶದವರು ಇಂದು ಮಾಡುತ್ತಿದ್ದಾರೆ. ಏಕೆಂದರೆ ಆಂಧ್ರದಲ್ಲಿ ಈಗ ಕಾಂಗ್ರೆಸ್‌ನವರೇ ಮುಖ್ಯಮಂತ್ರಿಗಳಾಗಿದ್ದಾರೆ ಮತ್ತು ಕರ್ನಾಟಕದಲ್ಲೂ ಕೂಡ ಕಾಂಗ್ರೆಸ್ ಮತ್ತು ಜೆ.ಡಿ.ಎಸ್. ಪಕ್ಷಗಳ ಮೈತ್ರಿಕೂಟ ಸರ್ಕಾರವಿರುವುದರಿಂದ ಈ ಬಗ್ಗೆ ಬಹಳ ಸೂಕ್ಷ್ಮವಾಗಿ ನಾವು ಇಂದು ನೋಡಬೇಕಾಗುತ್ತದೆ. ಈ ಹಿಂದೆಯೇ ಮಾನ್ಯ ಚಂದ್ರಬಾಬುನಾಯ್ಡುರವರು ಮುಖ್ಯಮಂತ್ರಿಗಳಾಗಿದ್ದಾಗಲೂ ಕೂಡ ಈ ನೀರಿಗಾಗಿ ಹಲವಾರು ಹುನ್ನಾರಗಳನ್ನು ಮಾಡಿದರು. ಆಗಲೇ ಅವರು ನೀರನ್ನು ಬಿಡುವಂತೆ ಕೇಳಿದ್ದರು. ಆದರೆ ಆಗ ನಾವೆಲ್ಲರೂ ಪ್ರತಿಭಟನೆಯನ್ನು ಮತ್ತು ಒತ್ತಡವನ್ನು ಮಾಡಿದ್ದರಿಂದ ನೀರನ್ನು ಕೊಡುವುದಕ್ಕೆ ಆಗುವುದಿಲ್ಲವೆನ್ನುವ ಮಾತು ಅಂದು ಬಂತು. ಆದರೆ ಇವೊತ್ತು ನೀರನ್ನು ಬಿಡಿಸಿಕೊಳ್ಳುವ ವಿಚಾರದಲ್ಲಿ ಆಂಧ್ರದವರದ್ದು ಒಂದು ಕುತಂತ್ರ ಇದೆ. ಇವೊತ್ತು 'ಎ' ಸ್ಕೀಂ ಪ್ರಕಾರ ಮತ್ತು 'ಜಿ' ಸ್ಕೀಂ ಪ್ರಕಾರ ಏನು ಯೋಜನೆಗಳು ಪೂರ್ಣಗೊಳ್ಳಬೇಕಾಗಿತ್ತೋ ಅವುಗಳು ಪೂರ್ಣವಾಗಿಲ್ಲವೆನ್ನುವಂಥ ಮಾತನ್ನು ಅವರು ಹೇಳುತ್ತಿದ್ದಾರೆ. ಇವೊತ್ತು 'ಎ' ಸ್ಕೀಂ ಪ್ರಕಾರ ನೀರನ್ನು ಪಡೆದುಕೊಳ್ಳುವ ಹಕ್ಕು ಏನಿದೆಯೋ ಆ ಪ್ರಕಾರ ನೀವು ಯುಟಿಲೈಸ್ ಮಾಡಿಲ್ಲವೆಂದು ಹೇಳಿ ಅವರು ಟ್ರಿಬ್ಯುನಲ್ ಕಾನ್‌ಸ್ಟಿಟ್ಯೂಟ್ ಮಾಡಬೇಕೆಂದು ಆಂಧ್ರದವರು ಅರ್ಜಿಯನ್ನು ಏನು ಕೊಟ್ಟಿದ್ದರೋ ಆ ಸಂದರ್ಭದಲ್ಲಿ 'ಎ' ಸ್ಕೀಂ ಪ್ರಕಾರ ನೀವು ನೀರನ್ನು ಸಂಪೂರ್ಣವಾಗಿ ಯುಟಿಲೈಸ್ ಮಾಡಿಲ್ಲ, ಅದಕ್ಕಾಗಿ ಅದರಲ್ಲೂ ನಮ್ಮ ಪಾಲಿನ ನೀರನ್ನು ಕೊಡಿ ಎನ್ನುವಂಥ ಮಾತನ್ನು, ಹುನ್ನಾರವನ್ನು ಇವೊತ್ತು ಆಂಧ್ರ ಪ್ರದೇಶದವರು ಮಾಡುತ್ತಿದ್ದಾರೆ. ಏಕಸ್ಮಾತ್ ನಾವು ಆ ಒಂದು ರಾಜಕೀಯ ಒತ್ತಡಕ್ಕೆ ಏನಾದರೂ ಮಣಿದು ಇವೊತ್ತು ಯಾವುದೋ ಒಂದು ಉದ್ದೇಶದಿಂದ ನಾವು ನೀರನ್ನು ಬಿಟ್ಟರೆ ಒಂದು ಟಿ.ಎಂ.ಸಿ. ಯಾಗಲಿ, 5 ಟಿ.ಎಂ.ಸಿ.ಯಾಗಲಿ, 10 ಟಿ.ಎಂ.ಸಿ.ಯಾಗಲಿ, ಇವೊತ್ತು ಅವರು 50

ಟಿ.ಎಂ.ಸಿ. ನೀರನ್ನು ಅವರು ಕೇಳುತ್ತಿದ್ದಾರೆ. ಏನಾದರೂ ನಾವು ನೀರನ್ನು ಬಿಡುವಂಥ ಪ್ರಸಂಗ ಬಂದರೆ ಅದರಿಂದ ಒಂದು ದೊಡ್ಡ ಅನಾಹುತ ಇವೊತ್ತು ನಮ್ಮ ರಾಜ್ಯದಲ್ಲಿ ಆಗುತ್ತದೆ. ನಮ್ಮ ಹಿತಾಸಕ್ತಿಯಲ್ಲಿರುವ ನಮ್ಮ ಹಕ್ಕನ್ನು ಕಳೆದುಕೊಳ್ಳುವಂಥ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಏಕೆಂದರೆ ಈಗ ಅವರು. ಕೇಳಿದ್ದು ಈಗ ಸರ್‌ಪ್ಲಸ್ ವಾಟರ್ ಇದೆಯಾದ ಕಾರಣ ಅದರಲ್ಲಿ ನಮಗೆ ಶೇರ್ ಕೊಡಿ ಎನ್ನುವಂಥದ್ದನ್ನು ಇವೊತ್ತು ಟ್ರಿಬ್ಯುನಲ್ ಕಾನ್‌ಸ್ಟಿಟ್ಯೂಟ್ ಆಗಿಲ್ಲದೇ ಇರುವುದರಿಂದ ಇವರು ಕೇಳಿದ್ದಾರೆ. ಈಗೇನಾದರೂ ನೀರು ಬಿಡುವಂಥದ್ದು ಏನಾದರೂ ಆದರೆ ನಾಳೆ ಅದೇ ಹಕ್ಕನ್ನು ಸಂಪ್ರದಾಯ ರೀತಿಯಲ್ಲಿ ಅದನ್ನು ಮುಂದುವರೆಸಿಕೊಂಡು ಹೋಗುತ್ತಾರೆ. ಇವೊತ್ತು ಮಾನವೀಯ ದೃಷ್ಟಿಯಿಂದ ಕೊಡಿ ಎಂದು ಹೇಳುತ್ತಾರೆ. ಆದರೆ ನಾಳೆಯ ದಿನಗಳಲ್ಲಿ ಅದನ್ನೇ ಕಾನೂನುಬದ್ಧವಾಗಿ ಕೇಳುವುದಕ್ಕೆ ಪ್ರಾರಂಭ ಮಾಡುತ್ತಾರೆ. ಈಗಾಗಲೇ ಆಂಧ್ರದ ನಿಯೋಗ ಪ್ರಧಾನಮಂತ್ರಿಯನ್ನು ಭೇಟಿ ಮಾಡಿದೆ. ಈಗ ಸದನದಲ್ಲಿ ಉಪ ಮುಖ್ಯಮಂತ್ರಿಗಳು ಇದ್ದಾರೆ, ಹಿರಿಯ ಸಚಿವರಾದ ಮಾನ್ಯ ಸಿಂಧ್ಯಾರವರು ಇದ್ದಾರೆ. ಅವರು ಆಲಮಟ್ಟಿ ಅಣೆಕಟ್ಟೆಯ ವಿಚಾರದಲ್ಲಿ ಸಾಕಷ್ಟು ಮಾಹಿತಿಗಳನ್ನು ತಿಳಿದುಕೊಂಡಿರುವವರಾಗಿದ್ದಾರೆ, ನಾನು ಮುಖ್ಯಮಂತ್ರಿಗಳಾದ ಮಾನ್ಯ ಧರ್ಮಸಿಂಗ್ ರವರಿಗೆ ಒತ್ತಾಯ ಮಾಡುವುದೇನೆಂದರೆ ದಯವಿಟ್ಟು ಈ ವಿಚಾರದಲ್ಲಿ ನೀವು ಹಿಂದು ಮುಂದು ನೋಡುವುದಕ್ಕೆ ಹೋಗಬೇಡಿ. ಏಕೆಂದರೆ ರಾಜ್ಯದ ಹಿತಾಸಕ್ತಿ ಮುಖ್ಯ. ಆದರೆ ಈ ಹಿಂದೆಲ್ಲಾ ಪಕ್ಕದ ರಾಜ್ಯಗಳಾದ ಆಂಧ್ರ, ತಮಿಳುನಾಡು ಮತ್ತು ಎಲ್ಲಾ ಕಡೆಗಳಿಂದಲೂ ಈ ಒಂದು ನೀರಿನ ಹಂಚಿಕೆ ವಿಷಯದಲ್ಲಿ ನಮ್ಮ ಮೇಲೆ ಹಲ್ಲೆ ಆಗುತ್ತಲೇ ಬಂದಿದೆ. ಆದಕಾರಣ ನಾನು ಈಗ ಮುಖ್ಯಮಂತ್ರಿಗಳನ್ನು ಒತ್ತಾಯ ಮಾಡುವುದೇನೆಂದರೆ ಇದನ್ನು ನೀವು ರಾಜಕೀಯವಾಗಿಯೇ ಎದುರಿಸಬೇಕಾಗುತ್ತದೆ. ಅವರು ಹೇಗೆ ರಾಜಕೀಯ ಒತ್ತಡವನ್ನು ತರುತ್ತಿದ್ದಾರೆ ಅದೇ ರೀತಿಯಾದಂಥ ರಾಜಕೀಯ ಒತ್ತಡವನ್ನು ತರುವಂಥ ಕೆಲಸ ಕೇಂದ್ರದಲ್ಲಿರುವಂಥವರ ಮೇಲೆ ತಾವು ತರಬೇಕಾದ ಕೆಲಸವನ್ನು ಮಾಡಬೇಕಾಗುತ್ತದೆ. ಈ ರೀತಿ ನೀವು ಮಾಡದಿದ್ದರೆ ಅವರು ನೀರನ್ನು ಕೇಳುವುದೇ ಒಂದು ಸಂಪ್ರದಾಯವಾಗುವ ಹಾಗೆ ಆಗುತ್ತದೆ. ನಾನು ಒಂದೇ ಮಾತನ್ನು ಹೇಳ್ಬುದೇನೆಂದರೆ ಯಾವ ರೀತಿಯಲ್ಲಿ ಈ ಹಿಂದೆ ಕಾವೇರಿ ವಿಚಾರ ಬಂದಾಗ, ಕೊಡಗಿನ ವಿಚಾರ ಬಂದಾಗ ನಾವೇನು ರಾಷ್ಟ್ರಪತಿಗಳ ಬಳಿಗೆ, ಪ್ರಧಾನಮಂತ್ರಿಗಳ ಬಳಿಗೆ ನಿಯೋಗವನ್ನು ಕರೆದುಕೊಂಡು ಹೋಗಲಾಗಿತ್ತೋ, ಸರ್ವಪಕ್ಷಗಳ ಸಭೆಯನ್ನು ಕರೆಯಲಾಗಿತ್ತೋ ಅದೇ ರೀತಿಯಲ್ಲಿ ಇಂದು ಸರ್ವ ಪಕ್ಷಗಳ ಸಭೆ ಕರೆದು ಸರ್ವಪಕ್ಷಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಈ ವಿಷಯದಲ್ಲಿ ಇವೊತ್ತು ಆಂಧ್ರದ ಹುನ್ನಾರಕ್ಕೆ ನಾವು ಪ್ರತಿತಂತ್ರವನ್ನು ಹೂಡಬೇಕೆನ್ನುವಂಥ ಒತ್ತಾಯವನ್ನು ನಾನು ರಾಜ್ಯ ಸರ್ಕಾರದ ಮೇಲೆ ನಮ್ಮ ಮುಖ್ಯಮಂತ್ರಿಗಳ ಮೇಲೆ ಮಾಡುತ್ತಿದ್ದೇನೆ. ಈ ವಿಚಾರದಲ್ಲಿ ಇಂದು ಎಲ್ಲಾ ರೀತಿಯಾದಂಥ ಪ್ರತಿಭಟನೆಯನ್ನು ಕೇಂದ್ರಕ್ಕೆ ಮತ್ತು ಆಂಧ್ರಕ್ಕೆ ನಾವು ತಿಳಿಸಬೇಕಾಗುತ್ತದೆ. ಈ ಆಂಧ್ರದ ಹುನ್ನಾರಕ್ಕೆ ಮಣಿಯಬಾರದು, ನಮ್ಮ ರಾಜ್ಯದ ಆ ಭಾಗದ ರೈತರ ಹಿತಾಸಕ್ತಿಗೆ ಯಾವುದೇ ರೀತಿಯಲ್ಲೂ ಧಕ್ಕೆ ಆಗಬಾರದು ಎಂದು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಗೋವಿಂದ ಎಂ ಕಾರ್ಜೋಳ : ಮಾನ್ಯ ಅಧ್ಯಕ್ಷರೆ,

ಅಧ್ಯಕ್ಷರು : ಆಯಿತು ಈಗಾಗಲೇ ಗಮನ ಸೆಳೆದಿದ್ದಾರೆ.

ಶ್ರೀ ಎಂ.ಪಿ. ವೆಂಕಟೇಶ್ (ಹೆಗ್ಗಡೆ ದೇವನಕೋಟೆ) : ಮಾನ್ಯ ಅಧ್ಯಕ್ಷರೆ, ನೀವು ಬರೇ ವಿರೋಧ ಪಕ್ಷದವರಿಗೆ ಮಾತನಾಡಲು ಹೇಳುತ್ತಿದ್ದೀರಿ. ಬರೇ ಅವರಿಗೆ ಅವಕಾಶ ಕೊಡುತ್ತಿದ್ದರೆ

ಅವರು ಬೆಳಿಗ್ಗೆಯಾಗುವವರೆಗೂ ಮಾತನಾಡುತ್ತಲೇ ಇರುತ್ತಾರೆ. ನಮ್ಮ ಕಡೆ ಈಗಾಗಲೇ ಅಕ್ಕಿ ಎಲ್ಲಾ ಕೊಳೆತುಹೋಗುತ್ತಿದೆ. ಈ ಬಗ್ಗೆ ಗಮನ ಸೆಳೆಯುವ ಸೂಚನೆ ಇದೆ. ಆದರೆ ಅದು ಇನ್ನೂ ತೆಗೆದುಕೊಂಡಿಲ್ಲ. ನಾವು ಮೊನ್ನೆಯಿಂದ ಕೇಳುತ್ತಲೇ ಇದ್ದೇವೆ. ಇಡೀ ರಾಜ್ಯದಲ್ಲಿ ಅಕ್ಕಿ ಎಲ್ಲವೂ ಕೊಳೆತು ನಾಶವಾಗುತ್ತಿದೆ. ಇದು ಬಹಳ ಪ್ರಮುಖವಾದ ವಿಚಾರವಾಗಿದೆ.

ಅಧ್ಯಕ್ಷರು : ತಾವು ದಯಮಾಡಿ ಕುಳಿತುಕೊಳ್ಳಿ. ಇದು ಬಹಳ ಪ್ರಮುಖವಾದ, ಗಂಭೀರವಾದ ವಿಚಾರವಾಗಿದೆ.

† **ಶ್ರೀ ಗೋವಿಂದ ಎಂ. ಕಾರಜೋಳ (ಮುದೋಳ್)** : ಮಾನ್ಯ ಅಧ್ಯಕ್ಷರೆ, ಇದೊಂದು ಗಹನವಾದ ವಿಚಾರ. ಈಗಾಗಲೇ ಆಂಧ್ರ ಪ್ರದೇಶದ ಮುಖ್ಯಮಂತ್ರಿಗಳಾದ ಮಾನ್ಯ ರಾಜಶೇಖರ ರೆಡ್ಡಿಯವರು ಮತ್ತು ಹಿಂದಿನ ಮುಖ್ಯಮಂತ್ರಿಗಳಾದಂಥ ಮಾನ್ಯ ಚಂದ್ರಬಾಬು ನಾಯ್ಡುರವರು ಮತ್ತು ಆಂಧ್ರಪ್ರದೇಶದಲ್ಲಿರುವಂಥ ಎಲ್ಲ ಸರ್ವಪಕ್ಷಗಳ ನಿಯೋಗವನ್ನು ಕೊಂಡೊಯ್ದು ನಮ್ಮ ದೇಶದ ಪ್ರಧಾನಮಂತ್ರಿಗಳನ್ನು ಹಾಗೂ ಜಲಸಂಪನ್ಮೂಲ ಮಂತ್ರಿಗಳನ್ನು ನಿನ್ನೆಯ ದಿವಸ ಭೇಟಿಯಾಗಿದ್ದಾರೆ. ಭೇಟಿಯಾಗಿ ಬಹುಶಃ ಅವರಿಗೆ ತಪ್ಪು ಮಾಹಿತಿಯನ್ನು ಆಂಧ್ರ ಸರ್ಕಾರದವರು ಕೊಟ್ಟು ಬಂದಿದ್ದಾರೆ. ಆಲಮಟ್ಟಿ ಅಣೆಕಟ್ಟೆಯಲ್ಲಿ ಈಗಾಗಲೇ 137 ಟಿ.ಎಂ.ಸಿ ನೀರು ಸಂಗ್ರಹವಾಗಿದೆ. ಆಲಮಟ್ಟಿ ನೀರನ್ನು ಸಂಪೂರ್ಣವಾಗಿ ಉಪಯೋಗ ಮಾಡಿಕೊಳ್ಳುವುದಕ್ಕೆ ಕರ್ನಾಟಕದವರಿಗೆ ಸಾಧ್ಯವಿಲ್ಲ. ಅವರು ಮೂಲಭೂತ ಸೌಕರ್ಯಗಳನ್ನು ಮಾಡಿಕೊಂಡಿಲ್ಲ. ಕೇವಲ 70 ಟಿ.ಎಂ.ಸಿ. ನೀರನ್ನು ಉಪಯೋಗ ಮಾಡಿಕೊಳ್ಳುವುದಕ್ಕೆ ಮಾತ್ರ ಸಾಧ್ಯವಾಗುತ್ತದೆ. ಅದಕ್ಕಾಗಿ ನಮಗೆ 50 ಟಿ.ಎಂ.ಸಿ. ನೀರನ್ನು ಬಿಡಿಸಬೇಕು ಎಂದು ಕೇಳಿಕೊಂಡಿದ್ದಾರೆ. ಆದರೆ ಆ ಮಾಹಿತಿಗಳು ಸರಿಯಾದುದಲ್ಲ. ನಿಯೋಗಕ್ಕೆ ಈಗಾಗಲೇ ಜಲಸಂಪನ್ಮೂಲ ಮಂತ್ರಿಗಳು ಏನು ಹೇಳಿದ್ದಾರೆಂದರೆ ಪ್ರಧಾನಮಂತ್ರಿಗಳು ಈಗಾಗಲೇ ಕರ್ನಾಟಕದ ಮುಖ್ಯಮಂತ್ರಿಯಾದಂಥ ಸನ್ಮಾನ್ಯ ಶ್ರೀ ಧರ್ಮಸಿಂಗ್‌ರವರಿಗೆ ಈಗಾಗಲೇ ಸೂಚನೆಯನ್ನು ಕೊಟ್ಟಿರುವುದರಿಂದ ಅವರು ನೀರು ಬಿಡುತ್ತಾರೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ, ಈ ಆಲಮಟ್ಟಿ ಅಣೆಕಟ್ಟಿನಿಂದ ಇವೊತ್ತಿನವರೆವಿಗೂ ಸಂಗ್ರಹವಾದ ನೀರು ಕೇವಲ 100 ಟಿ.ಎಂ.ಸಿ.ಯಷ್ಟು ಮಾತ್ರ. ಜಲಾಶಯದ ಕೆಪ್ಯಾಸಿಟಿ ಇರುವುದು 173 ಟಿ.ಎಂ.ಸಿ. ಕಳೆದ ನಾಲ್ಕು ವರ್ಷದಿಂದ ಬರಗಾಲ ಇದ್ದಂಥ ಸಂದರ್ಭದಲ್ಲಿ ಅಲ್ಲಿಯ ರೈತರು ಯಾವ ಬೆಳೆಯನ್ನೂ ಬೆಳೆದಿಲ್ಲ. ಇವೊತ್ತು ಆಲಮಟ್ಟಿ ಅಣೆಕಟ್ಟೆಯಲ್ಲಿ ನೀರಿನ ಸಂಗ್ರಹಣೆ ಆಗಿದೆ ಎನ್ನುವ ಕಾರಣಕ್ಕಾಗಿ ನಮ್ಮ ಭಾಗದ ನಾಲ್ಕು ಜಿಲ್ಲೆಯ ವ್ಯಾಪ್ತಿಯಲ್ಲಿ ಬರತಕ್ಕಂಥ ರೈತರು ಸುಮಾರು ಐದು ಲಕ್ಷ ಹೆಕ್ಟೇರ್‌ನಷ್ಟು ಭೂಮಿಯಲ್ಲಿ ಕಾಳನ್ನು ಬಿತ್ತಿದ್ದಾರೆ. ಇದೇ ನೀರನ್ನು ಅವಲಂಬಿಸಿ ಬಿತ್ತನೆ ಕಾರ್ಯವನ್ನು ಮಾಡಿದ್ದಾರೆ. ಹೀಗಿರುವಾಗ ಆ ನೀರನ್ನು ಆಂಧ್ರ ಪ್ರದೇಶಕ್ಕೆ ಕೊಟ್ಟರೆ ನಮ್ಮ ರೈತರು ವಿಷ ತೆಗೆದುಕೊಂಡು ಸಾಯುವಂಥ ಪ್ರಸಂಗ ಬರುತ್ತದೆ. ಸಾಲಸೋಲ ಮಾಡಿ ರೈತರು ಬಿತ್ತನೆಯನ್ನು ಮಾಡಿದ್ದಾರೆ. ಬೀಜಕ್ಕೆ ಸಾಲ ತಂದಿದ್ದಾರೆ. ಗೊಬ್ಬರಕ್ಕೆ ಸಾಲ ತಂದಿದ್ದಾರೆ. ಬಿತ್ತನೆ ಮಾಡುವುದಕ್ಕೆ ಸಾಲವನ್ನು ತಂದಿದ್ದಾರೆ, ಹೀಗಾಗಿ ಅವರ ಸ್ಥಿತಿ ಹೇಳತೀರದು. ಆಹಕಾರಣ ತಾವು ಈ ಬಗ್ಗೆ ಹತ್ತು ನಿಮಿಷ ಚರ್ಚೆಗೆ ಅವಕಾಶ ಮಾಡಿಕೊಡುವುದಿಲ್ಲ. ಇಡೀ ದಿನ ಈ ಬಗ್ಗೆ ಚರ್ಚೆಯಾಗಲಿ. ಎಲ್ಲಾ ಪಕ್ಷದವರೂ ಮಾತನಾಡಲಿ. ಆ ಕಡೆಯವರು ಮಾತನಾಡಲಿ, ಈ ಕಡೆಯವರು ಮಾತನಾಡಲಿ, ಒಂದು ವೇಳೆ ಅಕಸ್ಮಾತ್ತಾಗಿ ನಮ್ಮ ಕಾಂಗ್ರೆಸ್ ಸ್ನೇಹಿತರು ನಾನು ಮಾತನಾಡುವಾಗ ನಡುವೆ ಎದ್ದು ಮಾತನಾಡಿದರು, ಅವರಿಗೆ ಪ್ರೀತಿ ಇದ್ದರೆ ಸಂಪೂರ್ಣವಾಗಿ 100 ಟಿ.ಎಂ.ಸಿ. ನೀರನ್ನು ಕೊಡುವಂಥ ಆದೇಶ ಮಾಡಿಸಿದರೆ ಮಾಡಲಿ.

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ : ಮಾನ್ಯ ಅಧ್ಯಕ್ಷರೆ, ನಾನು ಈಲ್ಡ್ ಆಗಿಲ್ಲ. ನಾನು ಅಧ್ಯಕ್ಷರ ಅಪ್ಪಣೆ ಪಡೆದು ಮಾತನಾಡುತ್ತಿದ್ದೇನೆ. ಇದು ರಾಜ್ಯದ ಪ್ರಶ್ನೆ ಇದೆ. ಇದೇನು ಹುಡುಗಾಟಿಕೆ ಮಾಡುವ ವಿಚಾರವಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಯಾರು ಹುಡುಗಾಟಿಕೆ ಮಾಡುತ್ತಿದ್ದಾರೆ.

ಶ್ರೀ ಗೋವಿಂದ ಎಂ. ಕಾರಜೋಳ : ಮಾನ್ಯ ಅಧ್ಯಕ್ಷರೆ, ಇವೊತ್ತು ಡ್ಯಾಮ್‌ನಲ್ಲಿ ಕೇವಲ 100 ಟಿ.ಎಂ.ಸಿ. ನೀರು ಮಾತ್ರ ಇರುವುದು, ನೀರಿನ ಇನ್‌ಫ್ಲೋ ಜಾಸ್ತಿ ಇಲ್ಲ, ಕೇವಲ 5000 ಕ್ಯೂಸೆಕ್ಸ್ ನೀರಿನ ಇನ್‌ಫ್ಲೋ ಮಾತ್ರವಿದೆ. ಆದಕಾರಣ ಒಂದು ಹನಿ ನೀರನ್ನು ಕೂಡ ಈ ಅಣೆಕಟ್ಟೆನಿಂದ ಯಾವುದೇ ಸಂದರ್ಭದಲ್ಲೂ ಬಿಡಬಾರದು ಎಂದು ನಾವು ಒತ್ತಾಯ ಮಾಡುತ್ತೇವೆ. ಬೇಕಾಬಿಟ್ಟಿಯಾಗಿ ಅವರಿಗೆ ನೀರನ್ನು ಬಿಡಲು ಸಂಗ್ರಹ ಮಾಡಿದ ನೀರು ಇದಾಗಿಲ್ಲ, ಈ ನೀರಿನ ಮೇಲೆ ನಮ್ಮ ಪಾಲಿನ ಹಕ್ಕು ಮಾತ್ರ ಇರುವುದು. ನಾವು 734 ಟಿ.ಎಂ.ಸಿ.ಯಲ್ಲಿ ನಾವೇನು 729 ಟಿ.ಎಂ.ಸಿ. ನೀರನ್ನು ಉಪಯೋಗ ಮಾಡಿಕೊಳ್ಳಬೇಕಿದೆ ಬಚಾವತ್ ಸ್ಕೀಂ ಅವಾರ್ಡ್ ಪ್ರಕಾರ ಅದರಂತೆ ಆ ನೀರನ್ನು ನಾವು ಉಪಯೋಗ ಮಾಡಿಕೊಳ್ಳಬೇಕಾಗುತ್ತದೆ. ಆದುದರಿಂದ ಈ ಅಲೊಕೇಶನ್ ನೀರಿನ ಮೇಲೆ ಯಾವುದೇ ರಾಜ್ಯದ ಹಕ್ಕು ಇರುವುದಿಲ್ಲ. ಆದುದರಿಂದ ನಮ್ಮಲ್ಲಿ ಮೂಲಭೂತ ಸಮಸ್ಯೆ ಇದೆ. ನಾನು ತಮ್ಮಲ್ಲಿ ವಿನಂತಿಸುವುದೇನೆಂದರೆ ತಾವು ಮುಖ್ಯಮಂತ್ರಿಗಳನ್ನು ದಯಮಾಡಿ ಸದನಕ್ಕೆ ಕರೆಸಿ. ಮುಖ್ಯಮಂತ್ರಿಗಳಿಗೆ ನೀರನ್ನು ಬಿಡಲು ಹೇಳಿದ್ದಾರೆಂದು ಕೇಂದ್ರದ ಜಲಸಂಪನ್ಮೂಲ ಸಚಿವರು ಹೇಳಿದ್ದಾರೆ. ನಿಜವಾಗಿಯೂ ಪ್ರಧಾನ ಮಂತ್ರಿಗಳು ಮುಖ್ಯಮಂತ್ರಿಗಳಿಗೆ ಏನು ಸೂಚನೆಯನ್ನು ಕೊಟ್ಟಿದ್ದಾರೆ ಮತ್ತು ಮುಖ್ಯಮಂತ್ರಿಗಳು ಅವರಿಗೆ ಏನು ಹೇಳಿದರು ಅಥವಾ ಮುಖ್ಯಮಂತ್ರಿಗಳು ನೀರನ್ನು ಬಿಡುವುದಕ್ಕೆ ಒಪ್ಪಿಕೊಂಡಿದ್ದಾರೋ ಹೇಗೆ ಈ ವಿಚಾರಗಳಿಗೆ ದಯಮಾಡಿ ತಾವು ಮುಖ್ಯಮಂತ್ರಿಗಳನ್ನು ಸದನಕ್ಕೆ ಕರೆಸಿ ದಯಮಾಡಿ ಉತ್ತರ ಕೊಡಿಸಬೇಕೆಂದು ಆ ನಿಟ್ಟಿನಲ್ಲಿ ಪ್ರಯತ್ನ ಮಾಡಬೇಕೆಂದು ತಮ್ಮ ಮೂಲಕ ನಾನು ಸದನದಲ್ಲಿ ವಿನಂತಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ವಾಟಾಳ್‌ರವರೆ, ಅಧ್ಯಕ್ಷರು ಚರ್ಚೆ ಮಾಡಲು ಒಪ್ಪಿಗೆ ಕೊಟ್ಟರೆ ತಾವು ಮಾತನಾಡಿ. ಅಧ್ಯಕ್ಷರು ಇನ್ನೂ ಒಪ್ಪಿಗೆ ಕೊಟ್ಟಿಲ್ಲ. ಒಪ್ಪಿಗೆ ಕೊಟ್ಟರೆ ನಮ್ಮ ಕಡೆಯಲ್ಲೂ ಮಾತನಾಡುವವರು ಇದ್ದೇವೆ. ಆದುದರಿಂದ ಅಧ್ಯಕ್ಷರು ಒಪ್ಪಿಗೆ ಕೊಟ್ಟಿದ್ದಾರೋ ಎಂಬ ಬಗ್ಗೆ ಹೇಳಬೇಕು. ಒಂದು ವೇಳೆ ಚರ್ಚೆ ಮಾಡಲು ಒಪ್ಪಿಗೆ ಕೊಟ್ಟರೆ ನಾವು ಮಾತನಾಡುತ್ತೇವೆ.

ಶ್ರೀ ಎ.ಟಿ. ರಾಮಸ್ವಾಮಿ : ಮಾನ್ಯ ಅಧ್ಯಕ್ಷರೆ, ನಾನು ಬಹಳ ದಿನಗಳಿಂದ ಗಮನ ಸೆಳೆಯುವ ಸೂಚನೆ ಬಗ್ಗೆ ಕಾಯುತ್ತಿದ್ದೇನೆ. ಸಾವಿರಾರು ಕ್ವಿಂಟಾಲ್ ಅಕ್ಕಿ ಗೋದಾಮುಗಳಲ್ಲಿ ಕೊಳೆಯುತ್ತಾ ಬಿದ್ದಿದೆ. ಜಿಲ್ಲಾಧಿಕಾರಿಗಳು ಯಾವುದೇ ಆದೇಶ ಕೊಡುವುದಕ್ಕೆ ಆಗದೇ ಇರುವಂಥ ಪರಿಸ್ಥಿತಿ ಇದೆ. ಇದರ ಬಗ್ಗೆ ಸರ್ಕಾರದ ಆದೇಶ ಹೋಗಬೇಕಾಗಿದೆ. ಹೀಗಿದ್ದರೂ ನಮಗೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡುವುದಿಲ್ಲವೆಂದರೆ ಹೇಗೆ. ನಾನು ಸದನ ಪ್ರಾರಂಭವಾದ ದಿವಸದಿಂದಲೂ ಇದರ ಬಗ್ಗೆ ಮಾತನಾಡುವುದಕ್ಕೆ ಕಾಯುತ್ತಿದ್ದೇವೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ನಮಗೆ ಈಗಾಗಲೇ ಅವಕಾಶವನ್ನು ಕೊಟ್ಟಿದ್ದೀರಿ. ನಮ್ಮ ಕಡೆ ಇನ್ನೂ ಕೆಲವರು ಮಾತನಾಡುವವರಿದ್ದಾರೆ.

(ಗೊಂದಲ)

ಅಧ್ಯಕ್ಷರು : ಈಗಾಗಲೇ ವಿಷಯ ಪ್ರಸ್ತಾಪ ಮಾಡಿದ್ದೀರಿ. ಅದಕ್ಕೆ ಉತ್ತರ ಕೊಡಲಿ. ಉತ್ತರ ಕೊಟ್ಟಾದ ಮೇಲೆ ಬೇರೆ ನಿಯಮಾವಳಿಗಳ ಮೇಲೆ ತೆಗೆದುಕೊಳ್ಳುವ ಅಗತ್ಯವಿದ್ದರೆ ಹೆಚ್ಚು ಚರ್ಚೆಗೆ ಅವಕಾಶ ಮಾಡಿಕೊಡೋಣ. ಈಗಾಗಲೇ ಶೂನ್ಯವೇಳೆಯಲ್ಲಿ ತಾವು ಗಮನ ಸೆಳೆದಿದ್ದೀರಿ. ಸರ್ಕಾರದ ಪರವಾಗಿ ಅವರು ಉತ್ತರ ಕೊಡಲಿ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಆಡಳಿತ ಪಕ್ಷದ ಸದಸ್ಯರ ಈ ವರ್ತನೆ ಸರಿ ಇಲ್ಲ. ನಾನು ಧರಣಿ ಮಾಡುತ್ತೇನೆ.

(ಶ್ರೀ ವಾಟಾಳ್ ನಾಗರಾಜ್‌ರವರು ಸದನದ ಬಾವಿಗೆ ಬಂದು ಧರಣಿ ನಿರತರಾದರು. ಇವರ ಜೊತೆಗೆ ವಿರೋಧ ಪಕ್ಷದ ಉಪ ನಾಯಕರಾದ ಮಾನ್ಯ ಗೋವಿಂದ ಎಂ. ಕಾರಜೋಳ ಮತ್ತು ಇನ್ನಿತರ ಸದಸ್ಯರುಗಳು ಬಾವಿಗೆ ಬಂದರು)

ಅಧ್ಯಕ್ಷರು : ಮಾನ್ಯ ಗೋವಿಂದ ಕಾರಜೋಳ್‌ರವರೆ, ಈಗ ಸದನದಲ್ಲಿ ವಿರೋಧ ಪಕ್ಷದ ನಾಯಕರಾದ ಮಾನ್ಯ ಯಡಿಯೂರಪ್ಪನವರು ಇಲ್ಲ. ಈಗ ಉಪನಾಯಕರಾದ ತಾವು ಇದ್ದೀರಿ. ಜವಾಬ್ದಾರಿಯಿಂದ ನಡೆದುಕೊಳ್ಳಬೇಕಾಗುತ್ತದೆ. ನೀವು ನಿಮ್ಮ ಆಸನಗಳಿಗೆ ಹೋಗಿ. ಅವರು ಎದ್ದುನಿಂತರು ಎಂದ ತಕ್ಷಣ ನೀವೂ ಕೂಡ ಎದ್ದುನಿಂತುಕೊಂಡು ಬಿಡುವುದೇ ? ದಯಮಾಡಿ ನಿಮ್ಮ ಆಸನಗಳಿಗೆ ಹೋಗಿ

ಶ್ರೀ ವಾಟಾಳ್ ನಾಗರಾಜ್ : ನಮಗೆ ಈಗಲೇ ಮಾತನಾಡಲು ಅವಕಾಶ ಕೊಡಿ.

ಅಧ್ಯಕ್ಷರು : ಅವಕಾಶ ಕೊಡುವುದು ನನ್ನ ವಿವೇಚನೆಗೆ ಬಿಟ್ಟದ್ದು.

ಶ್ರೀ ವಾಟಾಳ್ ನಾಗರಾಜ್ : ನಾನು ನಿಮ್ಮನ್ನು ಮಾತನಾಡಲು ಅವಕಾಶ ಕೊಡುವಂತೆ ಕೇಳಿಯೇ ಮಾತನಾಡಿದ್ದು.

ಅಧ್ಯಕ್ಷರು : ತಾವು ಅವಕಾಶ ಕೇಳಿರುವುದನ್ನ ನಾನು ನಿರಾಕರಿಸಿಲ್ಲ. ಆದರೆ ನೀವು ಅವರು ನಿಂತುಕೊಂಡ ತಕ್ಷಣ ಸದನದ ಬಾವಿಗೆ ಬಂದುಬಿಟ್ಟಿರಿ. ಅದು ಸರಿಯಲ್ಲ. ಆದಕಾರಣ ಮೊದಲು ನಿಮ್ಮ ನಿಮ್ಮ ಆಸನಗಳಿಗೆ ಹೋಗಿ.

(ಗೊಂದಲ)

ಅಧ್ಯಕ್ಷರು : ಈ ಕಡೆಯ ಮಿತ್ರರುಗಳಿಗೆ ನನ್ನ ವಿನಂತಿಯೆಂದರೆ ಮೊದಲು ತಾವೆಲ್ಲರೂ ತಮ್ಮ ತಮ್ಮ ಆಸನಗಳಿಗೆ ಹೋಗಿ. ನಾನು ಅವಕಾಶ ಕೊಟ್ಟಿಲ್ಲ ಎಂದು ಹೇಳಿಲ್ಲ. ಅದಕ್ಕೆ ಮೊದಲೇ ನೀವೇ ಏಕೆ ತೀರ್ಮಾನಕ್ಕೆ ಬರುತ್ತೀರಿ ? ದಯಮಾಡಿ ತಾವೆಲ್ಲರೂ ತಮ್ಮ ತಮ್ಮ ಆಸನಗಳಿಗೆ ಹೋಗಿ ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು : ಮಾನ್ಯ ಗೋವಿಂದ ಕಾರಜೋಳರವರೆ, ದಯಮಾಡಿ ಕೇಳಿ. ನೀವು ವಿರೋಧ ಪಕ್ಷದ ಉಪ ನಾಯಕರಾಗಿದ್ದೀರಿ. ಅವರು ಎದ್ದು ನಿಂತರು ಅಂದ ತಕ್ಷಣ ನೀವುಗಳೆಲ್ಲರೂ ಬಾವಿಗೆ ಬಂದುಬಿಡುವ ಸಂಪ್ರದಾಯ ಒಳ್ಳೆಯದಲ್ಲ. ನಾನು ಇನ್ನೂ ಅವಕಾಶ ಕೊಡುವುದನ್ನು

ನಿರಾಕರಿಸಿಲ್ಲ. ಇನ್ನೂ ಆ ಬಗ್ಗೆ ನಾನು ತೀರ್ಪೆ ಕೊಟ್ಟಿಲ್ಲ. ಈ ಸದನದ ಗೌರವ ಹೆಚ್ಚಾಗುವ ರೀತಿಯಲ್ಲಿ ದಯಮಾಡಿ ತಾವುಗಳು ನಡೆದುಕೊಳ್ಳಬೇಕು.

(ಅಧ್ಯಕ್ಷರ ಆದೇಶದಂತೆ ಧರಣಿನಿರತರಾಗಿದ್ದು ಶ್ರೀವಾಟಾಳ್‌ನಾಗರಾಜ್ ಹಾಗೂ ಶ್ರೀ ಗೋವಿಂದ ಎಂ. ಕಾರಜೋಳ ಹಾಗೂ ಇನ್ನಿತರ ಸದಸ್ಯರುಗಳು ತಮ್ಮ ತಮ್ಮ ಆಸನಗಳಿಗೆ ಹೋಗಿ ಕುಳಿತುಕೊಂಡರು.)

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೆ, ಮಾನ್ಯ ಜಗದೀಶ್ ಶೆಟ್ಟರ್‌ರವರು ರಾಜ್ಯದ ಹಿತದೃಷ್ಟಿಯಿಂದಾಗಿ, ರಾಜ್ಯದ ಜಲವನ್ನು ಕಾಪಾಡುವ ದೃಷ್ಟಿಯಿಂದಾಗಿ ಬಹಳ ಗಹನವಾಗಿರತಕ್ಕಂಥ ವಿಚಾರವನ್ನು ಸದನದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಸರ್ಕಾರ ಅದಕ್ಕೆ ಉತ್ತರ ಕೊಡಬೇಕಾಗುತ್ತದೆ. ಅದರಂತೆ ಸರ್ಕಾರ ಉತ್ತರ ಕೊಡುವುದಕ್ಕೆ ತಯಾರಿದೆ. ನಮ್ಮ ಕಡೆಯ ಸದಸ್ಯರುಗಳು ಹೇಳುವುದು ಏನೆಂದರೆ ಇವೊತ್ತಿನ ಅಜೆಂಡಾದಲ್ಲಿರತಕ್ಕಂಥ ವಿಚಾರಗಳಲ್ಲಿ ಯಾವುದನ್ನೂ ತೆಗೆದುಕೊಂಡಿಲ್ಲ. ಇನ್ನೂ ಗಮನ ಸೆಳೆಯುವ ಸೂಚನೆಗಳಿವೆ. ಆದರೆ ಇವೊತ್ತು ಮೂರು ಗಂಟೆಗೆ ಸದನದ ಕಲಾಪ ಮುಗಿದು ಹೋಗುತ್ತದೆಯಾದ ಕಾರಣ ಸದಸ್ಯರುಗಳು ಎದ್ದುನಿಂತುಕೊಂಡು ಅಭಿಪ್ರಾಯ ವ್ಯಕ್ತಮಾಡಿದ್ದಾರಷ್ಟೆ. ವಾಟಾಳ್‌ನಾಗರಾಜ್‌ರವರು ಮಾತನಾಡಲು ಎದ್ದುನಿಂತರೆ ನನ್ನದೇನೂ ತಕರಾರಿಲ್ಲ. ಮಾನ್ಯ ವಾಟಾಳ್‌ನಾಗರಾಜ್‌ರವರಿಗೂ ಮಾತನಾಡಲು ತಾವು ಅವಕಾಶ ಕೊಡಿ. ಆದರೆ ನಮ್ಮವರಿಗೂ ಅವಕಾಶ ಕೊಡಿ ಎಂದು ಕೇಳಿಕೊಳ್ಳುತ್ತೇನೆ. ಸರ್ಕಾರ ಉತ್ತರ ಕೊಡುತ್ತದೆ.

ಅಧ್ಯಕ್ಷರು : ಮಾನ್ಯ ವಾಟಾಳ್ ನಾಗರಾಜ್‌ರವರೆ, ಈಗ ತಾವು ಹೇಳಬೇಕೆಂದಿರುವುದನ್ನು ಒಂದು ನಿಮಿಷದಲ್ಲಿ ಹೇಳಿ. ಆಮೇಲೆ ನಾನು ಇದನ್ನು ಚರ್ಚೆಗೆ ತೆಗೆದುಕೊಳ್ಳಬೇಕೇ ಅಥವಾ ಬೇಡವೇ ಎಂಬ ಬಗ್ಗೆ ಯೋಚನೆ ಮಾಡುತ್ತೇನೆ.

(ಗೊಂದಲ)

ಅಧ್ಯಕ್ಷರು : ದಯಮಾಡಿ ಆಡಳಿತ ಪಕ್ಷದ ಸದಸ್ಯರುಗಳು ಕುಳಿತುಕೊಳ್ಳಬೇಕು. ನಾನು ಅವಕಾಶ ಮಾಡಿಕೊಡುತ್ತೇನೆ. ದಯಮಾಡಿ ಸಹಕರಿಸಿ. ಆಡಳಿತ ನಡೆಸುತ್ತಿರತಕ್ಕಂಥ ಪಕ್ಷದ ಸದಸ್ಯರುಗಳು ತಾವು. ದಯಮಾಡಿ ಕುಳಿತುಕೊಳ್ಳಿ. ಬಹಳ ಗಂಭೀರವಾಗಿದೆ ಪ್ರಶ್ನೆ. ದಯಮಾಡಿ ಕುಳಿತುಕೊಳ್ಳಬೇಕು. ವಾಟಾಳ್‌ನಾಗರಾಜ್‌ರವರಿಗೆ ತಾವು ಈಗ ಮಾತನಾಡಿ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಇವೊತ್ತು ಆಂಧ್ರಪ್ರದೇಶದ ಸರ್ವಪಕ್ಷಗಳ ನಿಯೋಗ ದೆಹಲಿಗೆ ಹೋಗಿ ಪ್ರಧಾನಮಂತ್ರಿಗಳಿಗೆ ಮನವೊಲಿಸುವ ಕಾರ್ಯವನ್ನು ಮಾಡಿದ್ದಾರೆ. ಈ ಬಗ್ಗೆ ಕರ್ನಾಟಕ ಸರ್ಕಾರದ ಸ್ಪಷ್ಟ ನಿಲುವೇನು ? ಕರ್ನಾಟಕ ಸರ್ಕಾರ ಆ ರೀತಿಯಲ್ಲಿ ತಮ್ಮ ನಿಲುವನ್ನು ಪ್ರದರ್ಶನ ಮಾಡದೇ ಇದ್ದರೆ, ಈಗಾಗಲೇ ಮಾಡಬೇಕಾಗಿತ್ತು, ಈ ಸದನ ಸೇರಿದ ತಕ್ಷಣ ಮಾನ್ಯ ಮುಖ್ಯಮಂತ್ರಿಗಳು ಅಥವಾ ಅದಕ್ಕೆ ಸಂಬಂಧಪಟ್ಟಂಥ ಮಂತ್ರಿಗಳು ಒಂದು ಹೇಳಿಕೆಯನ್ನು ಸದನದಲ್ಲಿ ಹೇಳಬೇಕಾಗಿತ್ತು. ಏಕೆಂದರೆ ಇದೊಂದು ಪ್ರಾಮುಖ್ಯವಾದಂಥ ವಿಚಾರ. ಈಗಾಗಲೇ ಆಂಧ್ರದ ಸರ್ವ ಪಕ್ಷಗಳ ನಿಯೋಗ ಪ್ರಧಾನಮಂತ್ರಿಗಳನ್ನು ಭೇಟಿ ಮಾಡಿರುವುದರಿಂದ ಕರ್ನಾಟಕ ಸರ್ಕಾರದ ನಿಲುವೇನು ಎಂಬುದನ್ನು ಹೇಳಬೇಕಾಗಿತ್ತು. ಮೊದಲಿನಿಂದಲೂ ನಮ್ಮಲ್ಲಿ ಹೇಗೆ ನಡೆದಿದೆಯೆಂದರೆ ಪ್ರಧಾನಮಂತ್ರಿಗಳ ಹತ್ತಿರ ಹೋಗುವವರೆಗೂ ನಾವು ನೀರು ಬಿಡುವುದಿಲ್ಲ,

ನೀರು ಬಿಡುವುದಿಲ್ಲ ಎಂದು ಎಲ್ಲಾ ಸಂದರ್ಭಗಳಲ್ಲೂ ಮಾತನಾಡುತ್ತಿರುತ್ತೇವೆ. ಅದು ಕಾವೇರಿ ಇರಬಹುದು. ಮತ್ತೊಂದು ಇರಬಹುದು. ಆದರೆ ಅಂತಿಮವಾಗಿ ಕೇಂದ್ರದ ಒತ್ತಡ ಬಂದ ತಕ್ಷಣ ನೀರು ಬಿಟ್ಟಿರತಕ್ಕಂಥ ನಿದರ್ಶನಗಳಿವೆ. ಆದರೆ ಆಲಮಟ್ಟಿ ವಿಚಾರದಲ್ಲಿ ಮಾತ್ರ ಐದು ಜಿಲ್ಲೆಗಳು ಅತ್ಯಂತ ಘೋರ ಪರಿಣಾಮದಲ್ಲಿ ಇದೆ. ಯಾವ ಕಾರಣಕ್ಕೂ ಕೂಡ ನಮ್ಮ ಕರ್ನಾಟಕ ಸರ್ಕಾರ ಯಾರದೇ ಒತ್ತಡ ಬರಲಿ,, ಅವರು ಪ್ರಧಾನ ಮಂತ್ರಿಗಳಾಗಿರಲಿ ಯಾರದೇ ಒತ್ತಡ ಬಂದರೂ ಕೂಡ ನೀರು ಬಿಡಬಾರದು. ಆ ನಿಲುವನ್ನು ಇಲ್ಲಿ ಸರ್ಕಾರ ಸ್ಪಷ್ಟಪಡಿಸಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೆ, ಮಾಜಿ ವಿರೋಧ ಪಕ್ಷದ ನಾಯಕರಾದ ಜಗದೀಶ್ ಶೆಟ್ಟರ್, ಹಿರಿಯರಾದಂತಹ ವಾಟಾಳ್ ನಾಗರಾಜ್ ಮತ್ತು ಗೋವಿಂದ ಕಾರಜೋಳ ಅವರು ಒಂದು ಸಮಸ್ಯೆಯನ್ನು ಇವತ್ತು ಎತ್ತಿದ್ದಾರೆ. ಈಗ ಪತ್ರಿಕೆಗಳ ವರದಿ ಅಷ್ಟೇ ಅಲ್ಲ ನಮಗೆ ಸರ್ಕಾರಕ್ಕೆ ಬಂದಿರುವ ಮಾಹಿತಿಗಳ ಪ್ರಕಾರ ಸಹ ಆಂಧ್ರಪ್ರದೇಶದ ಮುಖ್ಯಮಂತ್ರಿಗಳು ಮತ್ತು ವಿರೋಧ ಪಕ್ಷದ ನಾಯಕರೆಲ್ಲಾ ಪ್ರಧಾನ ಮಂತ್ರಿಯವರನ್ನು ಭೇಟಿ ಮಾಡಿ ನೀರು ಬಿಡಬೇಕೆಂದು ಹೇಳಿ ಒತ್ತಡವನ್ನು ಮಾಡಿದ್ದಾರೆ. ಹಾಗೂ ಮಾನ್ಯ ರಾಷ್ಟ್ರಪತಿಗಳು ಬೆಂಗಳೂರಿನಲ್ಲಿ ಇರುವುದರಿಂದ ಮಾನ್ಯ ಮುಖ್ಯಮಂತ್ರಿಗಳು ಈ ಸದನಕ್ಕೆ ಬಂದು ಉತ್ತರವನ್ನು ಕೊಡುವುದಕ್ಕಾಗುವುತ್ತಿಲ್ಲ. ಮಾನ್ಯ ಮುಖ್ಯ ಮಂತ್ರಿಗಳ ಕಾರ್ಯದರ್ಶಿಗಳ ಜೊತೆ ಈಗ ತಾನೆ ಸಮಾಲೋಚನೆಯನ್ನೂ ಸಹ ಮಾಡಿದ್ದೇನೆ. ಮತ್ತೆ ರಾತ್ರಿ ಕೇಂದ್ರದ ಜಲಸಂಪನ್ಮೂಲ ಮಂತ್ರಿಗಳು ಮಾನ್ಯ ಮುಖ್ಯಮಂತ್ರಿಗಳ ಜೊತೆ ಮಾತನಾಡಿದ್ದಾರೆ. ಇದು ಈಗ ಇರತಕ್ಕಂಥ ವಸ್ತು ಸ್ಥಿತಿ ನೀರು ಬಿಡಬೇಕೇ ಅಥವಾ ಕಾಂಪ್ರೋಮೈಸ್ ಮಾಡಿಕೊಳ್ಳಬೇಕೇ ; ಕರ್ನಾಟಕದಲ್ಲಿ ಕಾಂಗ್ರೆಸ್ ಮತ್ತು ಜೆಡಿಎಸ್ ನಾಯಕತ್ವದಲ್ಲಿ ಸಮ್ಮಿಶ್ರ ಸರ್ಕಾರ ಇದೆ. ಕೇಂದ್ರದಲ್ಲಿ ಸರ್ಕಾರ ಕಾಂಗ್ರೆಸ್ ಇದೆ. ಆಂಧ್ರದಲ್ಲೂ ಕೂಡ ರಾಜ್ಯಸರ್ಕಾರ ಕಾಂಗ್ರೆಸ್ ಇದೆ. ಅದಕ್ಕೋಸ್ಕರ ಅವರ ಒತ್ತಡಕ್ಕೆ ಮಣಿದು ನೀರನ್ನು ಬಿಟ್ಟುಬಿಡುತ್ತಾರೆ ಎಂದು ಹುಡುಗಾಟಿಕೆ ಮಾಡುತ್ತಾರೆ ಎನ್ನುವಂತಹ ಮಾತನ್ನು ನಮ್ಮ ಮಾನ್ಯ ಸದಸ್ಯರು ಕೆಲವರು ಮಾಡಿದರು. ಹುಡುಗಾಟಿಕೆಯನ್ನು ಖಂಡಿತವಾಗಿ ಈ ಸರ್ಕಾರ ಮಾಡುವುದಿಲ್ಲ. ನಿಮಗೆ ಎಷ್ಟೊಂದು ಕಳವಳ, ಕಾಳಜಿ ರಾಜ್ಯ ಜಲ ಹಾಗೂ ರೈತರ ರಕ್ಷಣೆ ಮಾಡುವುದಿದೆ ಅದರಲ್ಲಿ ನಾವೂ ಸಹ ಕಡಿಮೆ ಇಲ್ಲ ಈ ಸರ್ಕಾರ ಎಂದು ಮೊದಲನೆಯದಾಗಿ ಹೇಳುವುದಕ್ಕೆ ಬಯಸುತ್ತೇನೆ. ಯಾವುದಕ್ಕೂ ಸಹ ಸರ್ಕಾರ ಕಡಿಮೆ ಇಲ್ಲ ರಾಜ್ಯದ ರೈತರ ಹಿತರಕ್ಷಣೆ ಮಾಡುವುದು ನಮ್ಮ ಆದ್ಯ ಕರ್ತವ್ಯ ಇದೆ. ನಮ್ಮ ರೈತರಿಗೆ ನೀರು ಕೊಟ್ಟು ನಂತರ ಉಳಿದ ಪ್ರಶ್ನೆ ಬರುತ್ತದೆ. ಮಾನ್ಯ ಜಗದೀಶ್ ಶೆಟ್ಟರ್ ಅವರು ಒಂದು ರೆಲವೆಂಟ್ ಪಾಯಿಂಟ್ ರೈಜ್ ಮಾಡಿದ್ದಾರೆ. ಅದೇನೆಂದರೆ ಇವತ್ತು ಎಕ್ಕುಸ್ ನೀರಿನ ಬಗ್ಗೆ ಟ್ರಬ್ಯೂನಲ್ ಕಾನ್ಸಿಟಿಟ್ಯೂಟ್ ಮಾಡಬೇಕೆಂದು ಹೇಳಿ. Constitute ಆಗಿರುವುದರಿಂದ ಅದನ್ನೂ ಸಹ ನಮ್ಮ ಹಕ್ಕು ಎಂದು ಆಂಧ್ರಪ್ರದೇಶದವರು ಕೇಳಬಹುದು. ಆದುದರಿಂದ ರಾಜ್ಯಸರ್ಕಾರ ನೀರನ್ನು ಬಿಡುಗಡೆ ಮಾಡತಕ್ಕಂಥ ಸಂದರ್ಭದಲ್ಲಿ ಅದನ್ನು ಬಿಡಬಾರದು ಅದನ್ನೇ ಅವರು ಹಕ್ಕು ಎಂದು ಹೇಗೆ ಆಂಧ್ರಪ್ರದೇಶದವರು ನ್ಯಾಯಾಲಯದಲ್ಲಿ ತಕರಾರು ಎತ್ತಬಹುದು. ಎಂದು ಹೇಳಿ ಸರಿಯಾದ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಆದುದರಿಂದ ಸರ್ಕಾರ ಇದರ ಬಗ್ಗೆ ಯಾವುದೇ ನಿರ್ಧಾರ ತೆಗೆದುಕೊಂಡಿಲ್ಲವೆಂದು ಸ್ಪಷ್ಟವಾಗಿ ಹೇಳುವುದಕ್ಕೆ ಬಯಸುತ್ತೇನೆ. ಈ ಕ್ಷಣದವರೆಗೂ ಸಹ ನಾವು ನೀರನ್ನು ಬಿಟ್ಟಿಲ್ಲ. ಹಾಗೂ ನೀರನ್ನು ಬಿಡತಕ್ಕಂಥ ಪ್ರಶ್ನೆ ಕೂಡ ಆಗಿರುವುದಿಲ್ಲ. ಈಗ ಎಷ್ಟು ಇನ್‌ಫ್ಲೋ

ಆ ಡ್ಯಾಂ ನಲ್ಲಿ ಅಷ್ಟೇ ಔಟ್‌ಫ್ಲೊ ಸಹ ಇದೆ. ಮೂರುವರೆ ಸಾವಿರ ಕ್ಯೂಸೆಕ್ಸ್‌ನಿಂದ ನಾಲ್ಕೂವರೆ ಸಾವಿರ ಕ್ಯೂಸೆಕೆ ನೀರು ಬರುತ್ತಿದೆ. 518 ಮೀಟರ್ ನೀರು ಆಲಮಟ್ಟಿ ಜಲಾಶಯದಲ್ಲಿ ಇದೆ. ನಾರಾಯಣಪುರ ಡ್ಯಾಂ ಕೂಡ ತುಂಬಿರತಕ್ಕಂಥ ವಾಸ್ತವಾಂಶ ಸಂಗತಿ ಗೊತ್ತಿರುವುದಿದೆ. ಯಾವುದೇ ಕಾರಣಕ್ಕೂ ಇವತ್ತಿನ ಪರಿಸ್ಥಿತಿಯಲ್ಲಿ ನಮ್ಮ ರೈತರಿಗೆ ಎಷ್ಟು ನೀರು ಬೇಕಾಗುತ್ತದೆ. ನಮ್ಮ ಪರಿಸ್ಥಿತಿ ಏನು ಎನ್ನುವುದನ್ನು ನಾವು ನೋಡಬೇಕಾಗುತ್ತದೆ. ಪ್ರೆಸೆಂಟ್ ಸ್ಟೋರೇಜ್ ಪೊಜಿಸಷನ್ ನಿಮಗೆ ಹೇಳವುದಾದರೆ ಅದೇನೂ ಮುಖ್ಯ ಅಲ್ಲ. ಈಗ ಅದರ ಡಿಟ್ಯೆಲ್ಸ್ ಕೊಡುವುದಕ್ಕೆ ಹೋಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ನೀವು ಪ್ರಧಾನ ಮಂತ್ರಿಯವರನ್ನು ಭೇಟಿ ಮಾಡುತ್ತೀರಾ? ಅಷ್ಟು ಹೇಳಿ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಪ್ರಧಾನ ಮಂತ್ರಿಯವರನ್ನು ಭೇಟಿ ಮಾಡುವುದು ಅಷ್ಟೊಂದು ಅವಶ್ಯಕತೆ ಇವತ್ತಿನ ಸಂದರ್ಭದಲ್ಲಿ ನಮಗೆ ಇಲ್ಲ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಪ್ರಧಾನ ಮಂತ್ರಿಯವರ ಒತ್ತಡ ಏನಾದರೂ ತಮ್ಮ ಮೇಲೆ ಪ್ರಭಾವ ಬೀರಿದರೆ ಮುಂದೆ ಏನಾಗಬಹುದು ? ಅದಕ್ಕೋಸ್ಕರ ನೀವು ಪರ್ಯಾಯವಾಗಿ ಏನು ಮಾಡುತ್ತೀರಿ ಎಂಬುದನ್ನು ಸ್ಪಷ್ಟವಾಗಿ ಹೇಳಿ.

ಶ್ರೀ ಪಿ.ಜಿ.ಆರ್. ಸಿಂಧ್ಯ : ನಾನು ಈಗಾಗಲೇ ಹೇಳಿದ್ದೇನೆ. ನೀರನ್ನು ಬಿಟ್ಟಿಲ್ಲ. ನೀರನ್ನು ಬಿಡುವಂತಹ ಪ್ರಶ್ನೆ ಇವತ್ತಿನ ಪರಿಸ್ಥಿತಿಯಲ್ಲಿ ಸರ್ಕಾರದ ಮುಂದೆ ಇಲ್ಲ. ಇವತ್ತು ಸಾಯಂಕಾಲ ಅಥವಾ ನಾಳೆ ಸಚಿವ ಸಂಪುಟದ ಸಭೆ ಸೇರುತ್ತಿದೆ. ಆಗ ಕೂಡ ನಾವು ಕರ್ನಾಟಕ ರೈತರ ಹಿತವನ್ನು ಕಾಪಾಡುವುದಕ್ಕೆ ಸರ್ಕಾರ ಯಾವತ್ತೂ ಸಹ ಮುಂದಿರುತ್ತದೆ ಎಂದು ಮಾತ್ರ ಹೇಳುತ್ತೇನೆ. ಸದನ ಮತ್ತೆ ಸೋಮವಾರ ಸೇರುತ್ತಿದೆ. ನಾವು ನೀರನ್ನು ಬಿಟ್ಟರೆ ನೀವು ನಮ್ಮನ್ನು ಬಿಡುತ್ತೀರಾ ? ನಮಗೆ ಬಿಡಬೇಕು ಎನ್ನುವ ಉದ್ದೇಶ ಇದೆಯಾ ? 'ಅನಾವಶ್ಯಕವಾಗಿ' ಏಕೆ ಇದನ್ನು ದೊಡ್ಡ ವಿಚಾರ ಮಾಡಸುತ್ತೀರಿ ?

ಶ್ರೀ ವಾಟಾಳ್ ನಾಗರಾಜ್ : ಇವತ್ತಿನ ಪರಿಸ್ಥಿತಿಯಲ್ಲಿ ಹೇಳುತ್ತಿದ್ದೀರಿ, ಮುಂದೆ ಪರಿಸ್ಥಿತಿ ಏನಾದರೂ ಆದರೆ....

ಶ್ರೀ ಎಂ. ಗೋವಿಂದ ಕಾರಜೋಳ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರ ಕೊಡಬೇಕಾದರೆ ಸ್ಪಷ್ಟವಾಗಿ ನೀರು ಬಿಡುವುದಿಲ್ಲವೆಂದು ಹೇಳಲಿಲ್ಲ. ನಮ್ಮ ರೈತರಿಗೆ ಉಪಯೋಗ ಮಾಡಿಕೊಂಡು ಹೆಚ್ಚಾದರೆ ಬಿಡುವುದಕ್ಕೆ ವಿಚಾರ ಮಾಡುತ್ತೇವೆಂದು ಹೇಳಿದ್ದಾರೆ.

ಅಧ್ಯಕ್ಷರು : ನೀರು ಬಿಡುವುದಿಲ್ಲವೆಂದು ಹೇಳಿದ್ದಾರೆ.

ಶ್ರೀ ಎಂ. ಗೋವಿಂದ ಕಾರಜೋಳ : ಐದು ಲಕ್ಷ ಹೆಕ್ಟೇರಿನಲ್ಲಿ ಇವತ್ತು ರೈತರು ಅದೇ ನೀರನ್ನು ಅವಲಂಬಿಸಿ. ಬಿತ್ತನೆ ಮಾಡಿದ್ದಾರೆ. ಈಗ ಜಲಾಶಯದಲ್ಲಿ ಕೇವಲ 100 ಟಿಎಂಸಿ ನೀರು ಮಾತ್ರ ಇದೆ. ನಮಗೆ ಬೇಕಾಗಿರುವುದು 150 ಟಿಎಂಸಿ ಗಿಂತಲೂ ಹೆಚ್ಚು ನೀರು ಬಿತ್ತನೆ ಮಾಡಿದ ಜಮೀನಿಗೆ ಬೇಕಾಗುತ್ತದೆ. ಅದಕ್ಕೆ ಕೊಡುವುದಿಲ್ಲವೆನ್ನುವಂತಹ ಸ್ಪಷ್ಟ ಭರವಸೆಯನ್ನು ಮಾನ್ಯ ಸಚಿವರು ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಸರ್ಕಾರ ಉತ್ತರ ಸ್ಪಷ್ಟ ಇದೆ.